ಸಂಗ್ರಹಗಳ ಮೂಲಕ ಉತ್ತಮ ಲೇಖಕರ ಕೃತಿಗಳನ್ನು ಓದಿ ಅವರ ಕೊಡುಗೆಗಳನ್ನು, ಬರಹಗಳ ಸ್ಥಾನ, ಪ್ರಭಾವ, ಸಾಹಿತ್ಯ ಚರಿತ್ರೆಯಲ್ಲಿ ಅವರ ಸಾಧನೆ, ಸಾಂಸ್ಕೃತಿಕ ಕೊಡುಗೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಕುಮಾರವ್ಯಾಸ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನಗಿರುವ ಅಸಾಧಾರಣ ಸ್ಥಾನದ ಕಾರಣದಿಂದ ನಮ್ಮ ಕುತೂಹಲ ಕೆರಳಿಸುತ್ತಾನೆ. ಅವನ ಬಗ್ಗೆ, ಅವನ ಕೃತಿಗಳ ಬಗ್ಗೆ ಕೆಲವು ಪ್ರಶ್ನೆಗಳು ಹುಟ್ಟುತ್ತವೆ. ಅವನು ಏನನ್ನು ಬರೆದ, ಏನನ್ನು ಪ್ರತಿನಿಧಿಸಿದ, ಅವನ ಧ್ಯೇಯಗಳೇನು, ವಿಧಾನಗಳೇನು, ಸಾಧನೆಗಳೇನು, ಚಾರಿತ್ರಿಕ ದೃಷ್ಟಿಯಿಂದ ಅವನ ಕೃತಿ ಎಷ್ಟು ಮುಖ್ಯ, ಅದರಲ್ಲಿ ಶಾಶ್ವತ ಮೌಲ್ಯಗಳು ಯಾವ ರೂಪದಲ್ಲಿ ಇವೆ ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ. ಆದ್ದರಿಂದ ಓದುಗ ನೇರವಾಗಿ ಕೃತಿಯೊಂದಿಗೆ ಸಂಪರ್ಕ ಸಾಧಿಸಬಹುದು.

ಕನ್ನಡದಲ್ಲಿ ಈ ಬಗೆಯ ಸಂಗ್ರಹಗಳ ಪ್ರಕಟಣೆಯನ್ನು ಪ್ರಾರಂಭಿಸಿದ್ದು ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಪ್ರಕಟಣಾ ಸಮಿತಿ'. ಈ ಬಗೆಯ ಸಂಗ್ರಹಗಳ ಗುರಿ ಮತ್ತು ಉದ್ದೇಶಗಳನ್ನು ಕುರಿತು ಬಿ.ಎಂ. ಶ್ರೀಕಂಠಯ್ಯನವರು ಹೇಳುವ ಮಾತುಗಳು ಗಮನಾರ್ಹ. "ಒಂದು ಕಾವ್ಯದ ಸೊಗಸನ್ನು, ಒಬ್ಬ ಕವಿಯ ಕವಿತಾ ಶಕ್ತಿಯನ್ನು ತಿಳಿಯಬೇಕಾದರೆ ಕಾವ್ಯವನ್ನು ಸಂಪೂರ್ಣವಾಗಿ ತಿಳಿಯಬೇಕು; ಇಲ್ಲ, ಉತ್ತಮ ಕಾವ್ಯ ಭಾಗಗಳೆಲ್ಲವನ್ನಾದರೂ ನೋಡಬೇಕು. ಈ ಸಮಷ್ಟಿ ದೃಷ್ಟಿ ಸಾಧ್ಯವಾಗುವಂತೆ ಪಾಠಕ್ಕೆ ಪ್ರಮಾಣ ಅತಿಮೀರದಂತೆ ಕಾವ್ಯಗಳನ್ನು, ಅದರದರ ಸ್ವಭಾವಕ್ಕೆ ಉಚಿತವಾಗಿ ಸಂಗ್ರಹಿಸಿದರೆ ವಿದ್ಯಾರ್ಥಿಗಳಿಗೂ, ಸಾಮಾನ್ಯ ಜನಕ್ಕೂ, ಹಿತಕರವೂ, ಪ್ರಯೋಜನಕರವೂ ಆಗಬಹುದೆಂಬ ನಂಬಿಕೆಯಿಂದ ಈ ಸಂಗ್ರಹಗಳನ್ನು ಮಾಡುತ್ತೇವೆ. ಇದರ ಮುಖ್ಯ ಗಮನ–ಕಥಾಸರಣಿ ಕೆಡಬಾರದು. ಒಟ್ಟು ಕತೆಯ ಸ್ವಾರಸ್ಯಕ್ಕೆ, ಪಾತ್ರ ನಿರೂಪಣೆಗೆ, ಭಂಗ ಬರಬಾರದು; ವರ್ಣನೆಯ ಮತ್ತು ವಿವರಣೆಯ ಅವಶ್ಯವಾದ ಸಾರ ಬಿಟ್ಟು ಹೋಗಬಾರದು; ಎಲ್ಲಕ್ಕಿಂತ ಪ್ರಾಧಾನ್ಯವಾದದ್ದು; ಕವಿಯ ವ್ಯಕ್ತಿತ್ವಕ್ಕೆ ಆತನ ವಿಶೇಷ ಪ್ರತಿಭೆಗೆ ಲೋಪ ಬರಕೂಡದು. ಇಷ್ಟನ್ನೂ ಸಾಧಿಸುವುದು ಸಂಗ್ರಹಕಾರನ ಕರ್ತವ್ಯ; ಆದರೆ ಕಡು ಕಷ್ಟ." ಪಂಪನ 'ಆದಿ ಪುರಾಣ' ಸಂಗ್ರಹಕ್ಕೆ ಮುನ್ನುಡಿಯನ್ನು ಬರೆದಿರುವ ಕುವೆಂಪು ಅವರು "...ಪಂಪನ ಸಹಜ ಪ್ರತಿಭೆ ಕೃತಕವಾದ ಧರ್ಮ ಪಾಂಡಿತ್ಯದ ದಾಕ್ಷಿಣ್ಯಕ್ಕೆ ವಶವಾಗಿ ಕೆಲವಡೆ ಕಾವ್ಯದ ಕ್ಷೇತ್ರದಲ್ಲಿ ಶಾಸ್ತ್ರದ ವಸಾಹತುಗಳನ್ನು ಕಲ್ಪಿಸಿಕೊಂಡಿದೆ. ಈ ಶಾಸ್ತ್ರ ಆಯಾ ಧರ್ಮೀಯರಿಗೆ ಎಷ್ಟೇ ಅಗತ್ಯವಿದ್ದರೂ ಶುದ್ಧ ಸಾಹಿತ್ಯದ ದೃಷ್ಟಿಯಿಂದ ನೋಡುವವರಿಗೆ ಅನಾವಶ್ಯಕವಾದ ಹೊರೆಯಾಗುವುದೇ ಹೆಚ್ಚು ಸಂಭವ. ಆದ್ದರಿಂದ ಸಾಧ್ಯವಾದ ಎಡೆಗಳೆಲ್ಲೆಲ್ಲಾ ಈ ವಸಾಹತುಗಳನ್ನು ತೆಗೆದು ಅಥವಾ ಸಾಹಿತ್ಯ ಕ್ಷೇತ್ರದಲ್ಲಿ ವಿಲಯನಗೊಳಿಸಿ ಸಹಜ ಕ್ಷೇತ್ರವನ್ನಷ್ಟನ್ನೇ ಸಹೃದಯರಿಗೆ ನೀಡುವುದು ಇಂತಹ ಸಂಗ್ರಹಗಳ ಉದ್ದೇಶ." ಈ ಇಬ್ಬರು ಮಹನೀಯರ ಗುರಿ ಮತ್ತು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಹನೂರು ಅವರು ಎಂಟು ಸಾವಿರ ಷಟ್ಪದಿ ಇರುವ ಕಾವ್ಯವನ್ನು ಒಂದೂವರೆ ಸಾವಿರ ಪದ್ಯಗಳಿಗೆ ಇಳಿಸಿ ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಸಂಪಾದಿಸಿ ಕೊಟ್ಟಿದ್ದಾರೆ.

**ಮಾನವನ ಆಸಕ್ತಿಗಳು, ಧರ್ಮನಿರಪೇಕ್ಷ ವಿಚಾರಗಳು ಇವೆಲ್ಲವನ್ನು ಬಿಡದೆ ಸಂಗ್ರಹಿಸಿರುವ ಈ ಕೃತಿ ಓದುಗನನ್ನು ಆಕರ್ಷಿಸುವ ಗುಣ ಹೊಂದಿದೆ. ಮನುಷ್ಯ ಸಂಬಂಧಗಳ ಸ್ವರೂಪದ ಶೋಧನೆ ಕುಮಾರವ್ಯಾಸ ಭಾರತದ ಪ್ರಮುಖ ತಾತ್ತ್ವಿಕತೆಗಳಲ್ಲೊಂದು.**